**ಇಂದು ದಿನಾಂಕ 09.03.2026 ರಂದು ಡಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**1.** ನಾನು 2 ನೇ ಪಿ.ಯು.ಸಿ. ಓದಿದ್ದೇನೆ. ಬೆಂಗಳೂರಿಗೆ ಬಂದು 16 ವರ್ಷವಾಗಿದೆ. ಲಗ್ಗೆರೆಯಲ್ಲಿ ಇದ್ದೇನೆ. ಚೇತನ್ ಎನ್ನುವವರು ನನ್ನ ಸ್ನೇಹಿತರು. ಚೇತನ್ ರವರು ಬಿಸ್ನೂನೆಸ್ ಮಾಡುತ್ತಾರೆ ಅವರು ಬರಲು ಆಗುವುದಿಲ್ಲ ಆದ ಕಾರಣ ಜಿ.ಪಿ.ಎ. ಕೊಟ್ಟಿದ್ದಾರೆ. ಪ್ರಮಾಣ ಪತ್ರ ಮತ್ತು ಜಿ.ಪಿ.ಎ.ನ್ನು ದೇವನಹಳ್ಳಿಯಲ್ಲಿ ತಯಾರು ಮಾಡಿದ್ದಾರೆ. ನಮ್ಮ ಸ್ನೇಹಿತರಾದ ದಿನೇಶ್ ವಕೀಲರು ತಯಾರು ಮಾಡಿದ್ದಾರೆ. ಅದಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನೋಟರಿ ಮಾಡಿದವರ ಹೆಸರು ಗೊತ್ತಿಲ್ಲ. ಆ ಸಮಯದಲ್ಲಿ ನಾನು ಮತ್ತು ದಿನೇಶ್ ಇದ್ದೆವು. ಆಗ ಚೇತನ್ ರವರು ಇರಲಿಲ್ಲ. ಪ್ರಮಾಣ ಪತ್ರ ಮತ್ತು ನಿಡಿ-1 ಮಾಡಿಕೊಟ್ಟಾಗ ಚೇತನ್ ರವರು ಇರಲಿಲ್ಲ. ಆ ಎರಡಕ್ಕೂ ನಾನೇ ಮಾಹಿತಿ ಕೊಟ್ಟಿದ್ದೇನೆ. ಈ ದಾವೆಯನ್ನು ಭಾಗಕ್ಕೆ ಹಾಕಿದ್ದಾರೆ. ಯಾರ ಮೇಲೆ ಎಷ್ಟು ಆಸ್ತಿಗಳ ಮೇಲೆ ಹಾಕಿದ್ದಾರೆ ಎಂದು ಗೊತ್ತಿಲ್ಲ. ವಾದಿಗಳಲ್ಲಿ ಇಬ್ಬರ ಹೆಸರುಗಳು ನನಗೆ ಗೊತ್ತು. ಅವರು ನಾಗರಾಜು ಮತ್ತು ಸತ್ಯನಾರಾಯಣ. ಅವರನ್ನು ನಾನು ನೋಡಿಲ್ಲ. ಚೇತನ್ ಎನ್ನುವವರು ನನಗೆ 2013-14 ರಿಂದ ಪರಿಚಯ. ಚೇತನ್ ರವರು ತುಂಬಾ ಆಸ್ತಿಗಳನ್ನು ಖರೀದಿ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಚೇತನ್ ರವರ ವ್ಯವಹಾರಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ.99 ಮತ್ತು 100 ನ್ನು ದಿನಾಂಕಃ 15.06.2017 ರಲ್ಲಿ ಖರೀದಿ ಮಾಡಿದ್ದಾರೆ. ಆ ಸಮಯದಲ್ಲಿ ನಾನು ಇರಲಿಲ್ಲ. ಅದರ ವ್ಯವಹಾರವಾದಾಗ ನಾನು ಇರಲಿಲ್ಲ. ನಿಡಿ-2 ಮತ್ತು 3 ದಾಖಲೆಗಳನ್ನು ಬಿಟ್ಟು ಬೇರೆ ಯಾವುದೇ ವ್ಯವಹಾರ ಸದರಿ ಆಸ್ತಿಗೆ ಸಂಬಂಧಿಸಿದಂತೆ ಆಗಿಲ್ಲ. ಆಗ ಚೇತನ್ ರವರು ಯಾರಿಗೆ ಎಷ್ಟು ಹಣವನ್ನು ಕೊಟ್ಟರು ಎಂದು ಗೊತ್ತಿಲ್ಲ. ಆದರೆ ಒಂದು ಆಸ್ತಿಗೆ ರೂ.1 ಕೋಟಿ 3 ಲಕ್ಷದ 50 ಸಾವಿರವನ್ನು ಕೊಟ್ಟಿದ್ದಾರೆ. ಇನ್ನೊಂದು ಆಸ್ತಿಗೆ ರೂ.78 ಲಕ್ಷ ಕೊಟ್ಟಿದ್ದಾರೆ. ಎರಡು ವ್ಯವಹಾರಗಳು ಯಾವಾಗ ಆಗಿವೆ ಎಂದು ಗೊತ್ತಿಲ್ಲ. ವಾದಿಗಳು ದಾವಾ ಆಸ್ತಿಗೆ ಸಂಬಂಧಿಸಿದಂತೆ ಹಾಕಿದ ದಾಖಲೆಗಳನ್ನು ನಾನು ನೋಡಿದ್ದೇನೆ. ಗೋಪಾಲಪ್ಪನಿಗೆ 5 ಜನ ಮಕ್ಕಳಿದ್ದರು ಎಂದರೆ ಸರಿಯಲ್ಲ 4 ಜನ ಇದ್ದರು. ಅವರು ಗೋಪಮ್ಮ, ಗೋಪಾಲಪ್ಪ, ನರಸಮ್ಮ ಮತ್ತು ಜಯಲಕ್ಷ್ಮಮ್ಮ. ಗೋಪಾಲಪ್ಪನವರು ನಮಗೆ ಕೊಟ್ಟ ವಂಶವೃಕ್ಷದ ಆಧಾರದ ಮೇಲೆ ಹೇಳುತ್ತಿದ್ದೇನೆ. ವಂಶವೃಕ್ಷವನ್ನು ನಾನು ಹಾಕಿರಬಹುದು. ಆ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇಲ್ಲ. ಮುನಿಯಪ್ಪ ಮತ್ತು ಗಂಗಮ್ಮನಿಗೆ

ವೆಂಕಟಲಕ್ಷ್ಮಮ್ಮ ಎನ್ನುವ ಮಗಳು ಇದ್ದಾಳೆ ಎಂದರೆ ಸುಳ್ಳು. ಅವರು ಮೃತರಾಗಿರುವ ಕಾರಣ ಅವರ ಮಕ್ಕಳು ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ. ನಾವು ಆಸ್ತಿಯನ್ನು ಖರೀದಿ ಮಾಡುವಾಗ ಕಾನೂನು ಅಭಿಪ್ರಾಯ ಪಡೆದುಕೊಂಡಿದ್ದೆವು.

(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**